ಅ) 1997-98ನೇ ಸಾಲಿಗೆ ಸರ್ಕಾರ ಇನ್ನೂ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮೂದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿರುವುದಿಲ್ಲ.

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರಾತಿಗಾಗಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದಿಲ್ಲ.

ಇ) ಅವಶ್ಯಕವಾದ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುತ್ತಿದೆ.

ಈ) ಉದ್ಭವಿಸುವುದಿಲ್ಲ.

ಶಿಕ್ಷಕರುಗಳಿಗೆ ಪೋಲಿಯೋ ತರಬೇತಿ.

2220 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲಿಯೋ ಕಾರ್ಯಕ್ರಮಕ್ಕಾಗಿ ಯಾವ ಯಾವ ತಾಲ್ಲೂಕುಗಳಲ್ಲಿ ಶಿಕ್ಷಕರುಗಳಿಗೆ ತರಬೇತಿ ಕೊಡಲಾಗಿದೆ?

ಆ) ಎಷ್ಟು ಜನ ಶಿಕ್ಷಕರುಗಳಿಗೆ ತರಬೇತಿ ಕೊಡಲಾಗಿದೆ? (ತಾಲ್ಲೂಕುವಾರು ಪಟ್ಟಿ ಒದಗಿಸುವುದು).

ಇ) ಇದಕ್ಕೆ ಖರ್ಚಾಗಿರುವ ಹಣ ಎಷ್ಟು?

ಈ) ಇದಕ್ಕೆ ಉಪಯೋಗಿಸಲಾದ ವಾಹನಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಕೊಡುವುದು).

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಶಿಕ್ಷಕರುಗಳ ತರಬೇತಿಗೆ ಹಣ ಖರ್ಚಾಗಿರುವುದಿಲ್ಲ. ಆದರೆ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ 1995-96 ಮತ್ತು 1996-97 ನೇ ಸಾಲಿನಲ್ಲಿ ಒಟ್ಟು ರೂ.: 262.80 ಲಕ್ಷ ಹಣ ಖರ್ಚು ಮಾಡಲಾಗಿದೆ.

ಈ) 1995-96 ನೇ ಸಾಲಿನಲ್ಲಿ ಮತ್ತು 1996-97ನೇ ಸಾಲಿನಲ್ಲಿ ಪ್ರತಿ ಸುತ್ತಿಗೂ ಪ್ರತಿ ತಾಲ್ಲೂಕಿನಲ್ಲಿ ಸರಾಸರಿ 8 ವಾಹನಗಳನ್ನು ಉಪಯೋಗಿಸಲಾಗಿದೆ.